**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**SPL.C. 5080/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ವಿಜಯ್ ಕುಮಾರ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಹನುಮಂತಯ್ಯ | 16.03.2026 |
| **ವಯಸ್ಸು** | : | 33 ವರ್ಷ | |
| **ವೃತ್ತಿ** | : | ಪೊಲೀಸ್ ಪೇದೆ, ಯಳಂದೂರು ಪೊ.ಠಾಣೆ | **ಫ್ರಾ.ಸಾಃ** 15 |
| **ವಾಸ ಸ್ಥಳ** | : | ಯಳಂದೂರು | **ಚಾ.ಸಾಃ** 45 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 03.07.2022 ರಿಂದ ದಿಃ 15.04.2025 ರವರೆಗೆ ಪೊಲೀಸ್ ಪೇದೆ ಆಗಿ ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 17.12.2024 ರಂದು ಚಾಸಾ 48 ರವರು ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು, ಸದರಿ ಮಹಜರ್ ಅನ್ನು ನಾನು ಬೆರಳಚ್ಚು ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ 6 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 6(ಬಿ) ಎಂದು ಗುರುತಿಸಲಾಯಿತು. ಚಾಸಾ 48 ರವರು ಮಹಜರ್ ಸಮಯದಲ್ಲಿ ಮು.ಮಾ 1 ಮತ್ತು 2 ಗಳನ್ನು ವಶಪಡಿಸಿಕೊಂಡರು. ನಿಪಿ 7 ರಿಂದ 16 ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರಗಳಾಗಿರುತ್ತವೆ.

ಅದೇ ದಿನ ಚಾಸಾ 49 ರವರು ಆರೋಪಿಯು ತೋರಿಸಿದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಮತ್ತು ಆರೋಪಿಯಿಂದ ಮು.ಮಾ 3 ರಿಂದ 7 ಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ನಾನು ಆ ಸಮಯದಲ್ಲಿ ವೀಡಿಯೋ ಚಿತ್ರೀಕರಣವನ್ನು

ಠಾಣೆಯ ಕ್ಯಾಮೇರಾದ ಮೂಲಕ ಮಾಡಿರುತ್ತೇನೆ. ಸಾಕ್ಷಿ ಭಾವಚಿತ್ರಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ 28 ರಿಂದ 35 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ವೀಡಿಯೋ ಚಿತ್ರೀಕರಣವನ್ನು ಠಾಣೆಯ ಕಂಪ್ಯೂಟರ್ ಮೂಲಕ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಈ ಸಂಬಂಧ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರೀತ್ಯಾ ದೃಡೀಕರಣವನ್ನು ನೀಡಿರುತ್ತೇನೆ. ದೃಡೀಕರಣವನ್ನು ನಿಪಿ 36 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 36(ಎ) ಎಂದು ಗುರುತಿಸಲಾಯಿತು. ಡಿವಿಡಿಯನ್ನು ನಿಪಿ 37 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಶ್ರೀ ಎಂ ಎಂ ಕೆ ವಕೀಲರಿಂದಃ**

ನಿಪಿ 27 ಅನ್ನು ಕೈಯಲ್ಲಿ ಬರೆದಿದೆ ಎಂದರೆ ಸರಿ. ಮು.ಮಾ 1 ಮತ್ತು 2 ಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಬೇರೆ ಸ್ಥಳದಲ್ಲಿ ಭಾವಚಿತ್ರಗಳನ್ನು ತೆಗೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ 7 ರಿಂದ 16 ಅನ್ನು ಸ್ಥಳದಲ್ಲಿ ತೆಗೆದ ಭಾವಚಿತ್ರಗಳಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಮು.ಮಾ 3 ರಿಂದ 7 ಗಳನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವೀಡಿಯೋ ಚಿತ್ರೀಕರಣ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

SC
PW

SC
PW

SC
PW

SC
PW

SC
PW

SC
PW

SC
PW